ಹೋಗತಕ್ಕಂಥದ್ದಕ್ಕೆ ಮಾರ್ಗಗಳು ಇಲ್ಲ, ಸರಿಯಾಗಿ ಸರಿಯಾದ ದಾರಿ ಇಲ್ಲದೇ ಇರುವುದರಿಂದ, ಯಾರೋ ಪ್ರವಾಸಿಗರು ಹಿಂದೆ ಅಲ್ಲಿಗೆ ಹೋಗಿ ನೋಡಿಕೊಂಡು ಬಂದು ಇಂಥಿಂಥ ಪ್ರದೇಶದಲ್ಲಿ ಇಂಥಿಂಥದ್ದು ಇದೆ ಎಂದು ಹೇಳಿದ್ದಾರೆ. ಆದ್ದರಿಂದ ನಮ್ಮ ರಾಜ್ಯದಲ್ಲಿರತಕ್ಕಂಥ ಪ್ರಪಂಚದಲ್ಲೇ ಅತ್ಯಂತ ಪ್ರೇಕ್ಷಣೀಯವಾಗಿರತಕ್ಕಂಥ ಸ್ಥಳಗಳನ್ನು ಪ್ರವಾಸಿಗರನ್ನು ಕರೆಸುವುದಕ್ಕೆ ಇನ್ ಫ್ರಾಸ್ಟ್ರಕ್ಚರ್ ಎಂದು ಏನು ಹೇಳುತ್ತೇವೆ, ಅಂದರೆ ರಸ್ತೆ ಸೌಲಭ್ಯ, ಬಸ್‌ಗಳ ಸೌಲಭ್ಯ, ಅಲ್ಲಿ ಇಳಿಮಕೊಳ್ಳುವುದಕ್ಕೆ ಬಂಗಲೆ ಅಂದರೆ ಪ್ರವಾಸಿ ಬಂಗಲೆ, ಇವುಗಳನ್ನು ಇನ್ನು 2 ವರ್ಷದಲ್ಲಿ ಮಾಡುತ್ತೇವೆ. ವಿಕೆಂದರೆ ನಾನು ತಕ್ಷಣ ಮಾಡುತ್ತೇವೆಂದು ಹೇಳುವುದಿಲ್ಲ. ಇನ್ನು ಎರಡು ವರ್ಷದಲ್ಲಿ ಇವನ್ನೆಲ್ಲ ಸುಧಾರಣೆ ಮಾಡುತ್ತೇವೆ.

ಅಧ್ಯಕ್ಷರು : ಈ ಪ್ರಶ್ನೆಗ ಸಂಬಂಧಿಸಿದಂತೆ ಒಂದು ಉಪ ಪ್ರಶ್ನೆಯಿದೆ. ನನಗೆ ನಜೀರ್ ಯಾವಾಗಲೂ. ಹೇಳುತ್ತಿದ್ದರು, ಗೋಪಾಲಸ್ವಾಮಿ ಬೆಟ್ಟ ಇದೆ, ಅಲ್ಲೂ ಕೂಡ ಅಭಿವೃದ್ಧಿ ಕೆಲಸ ಮಾಡಬೇಕೆಂದು. ಆದ್ದರಿಂದ ನೀರು ಈ ಎರಡೂ ಬೆಟ್ಟಗಳ ಬಗ್ಗೆ ತಾವು ಆಸಕ್ತಿ ವಹಿಸಿ ಕೆಲಸ ಮಾಡಿಸಬೇಕು.

ಶ್ರೀ ಜೆ.ಹೆಚ್. ಪಟೇಲ್ : ಆಗಬಹುದು ಮಾನ್ಯ ಅಧ್ಯಕ್ಷರೇ, ನನಗೆ ನಜೀರ್ ಸಾಬ್ ರವರ ನೆನಪು ಬರುತ್ತದೆ, ಅವರು ಬಹಳ ಸಾರಿ ಇದರ ಬಗ್ಗೆ ಹೇಳುತ್ತಿದ್ದರು, ಅದನ್ನು ನಮ್ಮ ಪಟ್ಟಿಯಲ್ಲಿ ಸೇರಿಸುತ್ತೇವೆ.

ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೇ, ಕಲ್ಲೂರಿನಲ್ಲಿ ಕೊಡಚಾದ್ರಿ ಪರ್ವತ ಇದೆ, ಇದರ ಜೊತೆಗೆ ನರಹರಿ ಪರ್ವತವನ್ನೂ ಕೂಡ ಸೇರಿಸಿದರೆ ಅದು ಕೂಡ ತುಂಬಾ ಪ್ರೇಕ್ಷಣೀಯ ಸ್ಥಳವಾಗುತ್ತದೆ ಎರಡು ನನ್ನ ಅನಿಸಿಕೆ.

ಶ್ರೀ ಸಿ.ಹೆಚ್. ವಿಜಯಶಂಕರ್ : ಮಾನ್ಯ ಅಧ್ಯಕ್ಷರೇ, ಕೊಡಚಾದ್ರಿ ತುಂಬಾ ಒಳ್ಳೆಯ ಸ್ಥಳ, ಈ ವಿಷಯ ಮಾನ್ಯ ಪಟೇಲ್‌ರಿಗೂ ಗೊತ್ತಿದೆ. ಶಿವಮೊಗ್ಗಾ ಜಿಲ್ಲಾ ಪರಿಷತ್ ನಿಂದ ಅದನ್ನು ಸ್ವಲ್ಪ ಅಭಿವೃದ್ಧಿ ಪಡಿಸುವಂಥ ಪ್ರಯತ್ನ ನಡೆದಿದೆ. ಅಲ್ಲಿಗೆ ಸಾವಿರಾರು ಜನರು ಬಂದು ಹೋಗುತ್ತಾರೆ. ದಯಮಾಡಿ ಅದನ್ನು ಅಭಿವೃದ್ಧಿ ಪಡಿಸಬೇಕು.

ಶ್ರೀ ಜೆ.ಹೆಚ್. ಪಟೇಲ್ : ನಾನು ನೋಡಿದ್ದೇನೆ, ಅದು ಬಹಳ ಉತ್ತಮವಾದ, ಸುಂದರವಾದ ಸ್ಥಳವೂ ಹೌದು. ಆದರೆ ಹೋಗತಕ್ಕಂಥ ಮಾರ್ಗವೇನಿದೆ ಅದು ತುಂಬಾ ಕೆಟ್ಟದಾದ ದಾರಿ ಇದೆ, ಅಲ್ಲಿಗೆ ಜೀಪ್ ಕೂಡ ಹೋಗುವುದಕ್ಕೆ ಕಷ್ಟ ಅಲ್ಲಿ ಒಂದು ಸಣ್ಣ ಗೆಸ್ಟ ಹೌಸ್ ಕಟ್ಟಿದ್ದರು, ಅದರ ಸುಧಾರಣೆ ಅವಶ್ಯಕ ಎನ್ನುವುದನ್ನು ನಾನು ಒಪ್ಪುತ್ತೇನೆ.

ಗಂತಸಿ ಕ್ಷೇತ್ರದ ಕುಡಿಯುವ ನೀರಿನ ಯೋಜನೆಗಳ ವಿದ್ಯುದ್ದೀಕರಣ.

132 - ಶ್ರೀ.ಬಿ. ಶಿವರಾಮು (ಗಂತಸಿ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗಂಡಸೀ ಕ್ಷೇತ್ರದ (ಹಾಸನ ತಾ: ದುದ್ದ ಮತ್ತು ಸಾಲುಗ್ರಾಮ ಹೋಬಳಿ, ಅರಸೀಕೆರೆ ತಾಲ್ಲೂಕು ಜಾವಗಲ್ ಮತ್ತು ಗಂಡಸೀ ಹೋಬಳಿ) ಕುಡಿಯುವ ನೀರಿನ ಯೋಜನೆಗಳು ವಿದ್ಯುದ್ದೀಕರಣವಾಗದೇ ಉಳಿದಿರುವ ಯೋಜನೆಗಳೆಷ್ಟು, ಯಾವ ಕಾರಣಕ್ಕಾಗಿ ಎಷ್ಟು ದಿವಸದಿಂದ ಬಾಕಿ ಇವೆ. ಯಾವಾಗ ವಿದ್ಯುದ್ದೀಕರಣವಾಗುತ್ತದೆ?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು)

ಅ) ಫೆಬ್ರವರಿ 1996ರ ಅಂತ್ಯದವರೆಗೆ ವಿದ್ಯುದ್ದೀಕರಣಕ್ಕಾಗಿ ಬಾಕಿ ಉಳಿದಿರುವ ಯೋಜನೆಗಳ ಒಟ್ಟು ಸಂಖ್ಯೆ 15. ಇವುಗಳ ಪೈಕಿ 7 ಕುಡಿಯುವ ನೀರಿನ ಯೋಜನೆಗಳ ವಿದ್ಯುದ್ದೀಕರಣಕ್ಕೆ ಸಂಬಂಧಿಸಿದ ಕಾರ್ಯವು ಈಗಾಗಲೇ ಪ್ರಗತಿಯಲ್ಲಿದ್ದು, ಆದಷ್ಟು ಶೀಘ್ರಗತಿಯಲ್ಲಿ ವಿದ್ಯುತ್ ಸಂಪರ್ಕವನ್ನು ಒದಗಿಸಲಾಗುವುದು. ಉಳಿದ 8 ಕುಡಿಯುವ ನೀರಿನ ಯೋಜನೆಗಳ ಪೈಕಿ 4 ಯೋಜನೆಗಳಿಗೆ ವಿದ್ಯುತ್ ಸಂಪರ್ಕ ಪಡೆಯಲು ಹಾಸನ ಜಿಲ್ಲಾ ಪಂಚಾಯತ್ನ ಇಂಜಿನಿಯರಿಂಗ್ ವಿಭಾಗವು ಮುಂಡಳಿಯ ನಿಯಮಗಳನ್ನು ಇದುವರೆಗೆ ಪಾಲಿಸಿರುವುದಿಲ್ಲ. ಮಂಡಳಿಯ ನಿಯಮಗಳನ್ನು ಪಾಲಿಸಿದ ನಂತರ ಮುಂದಿನ ಸೂಕ್ತ ಕ್ರಮಗಳನ್ನು ಜರೂರು ರೀತಿಯಲ್ಲಿ ಕೈಗೊಳ್ಳಲಾಗುವುದು. ಇನ್ನುಳಿದ 4 ಯೋಜನೆಗಳ ವಿದ್ಯುದ್ದೀಕರಣದ ಕಾರ್ಯಕ್ಕೆ ಸಂಬಂಧಿಸಿದಂತೆ ಅಂದಾಜು ಪಟ್ಟಿಯನ್ನು ತಯಾರಿಸಲಾಗುತ್ತಿದ್ದು ಆದಷ್ಟು ಜಾಗ್ರತೆ ವಿದ್ಯುತ್ ಮಂಜೂರಾತಿಯನ್ನು ಹಾಸನ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗಕ್ಕೆ ತಿಳಿಸಲಾಗುವುದು.

ಶ್ರೀ ಬಿ. ಶಿವರಾಮು : ಮಾನ್ಯ ಅಧ್ಯಕ್ಷರೇ, ನಾನು ಕುಡಿಯುವ ನೀರಿನ ಯೋಜನೆಗಳಲ್ಲಿ ವಿದ್ಯುದ್ದೀಕರಣವಾಗಿದೆ ಉಳಿದಿರುವ ಯೋಜನೆಗಳು ಎಷ್ಟು ಎಂದು ಕೇಳಿದ್ದೇನೆ. ಅದಕ್ಕೆ ಅವರು ಉತ್ತರದಲ್ಲಿ 15 ಎಂದು ಹೇಳಿದ್ದಾರೆ. ಯಾವ ಕಾರಣಕ್ಕಾಗಿ ಎಷ್ಟು ದಿವಸಗಳಿಂದ ಬಾಕಿ ಇದೆಯೆಂದು ನಾನು ಕೇಳಿದ್ದೇನೆ, ಅದಕ್ಕೇನಾದರೂ ಮಾಹಿತಿಗಳು ಇದೆಯೇ?

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಪ್ರಶ್ನೆಯಲ್ಲಿ ಗಂಡಸೀ ಕ್ಷೇತ್ರದ ಹಾಸನ ತಾಲ್ಲೂಕು ದುದ್ದ ಮತ್ತು ಸಾಲಿಗ್ರಾಮ ಹೋಬಳಿ ಅರಸೀಕೆರೆ ತಾಲ್ಲೂಕು ಜಾವ್ಗಾಲ್ ಮತ್ತು ಗಂಡಸಿ ಹೋಬಳಿ ಕುಡಿಯುವ ನೀರಿನ ಯೋಜನೆಗಳು ವಿದ್ಯುದ್ದೀಕರಣವಾಗದೆ ಉಳಿದಿರುವ ಯೋಜನೆಗಳೆಷ್ಟು, ಯಾವ ಕಾರಣಕ್ಕಾಗಿ, ಎಷ್ಟು ದಿವಸದಿಂದ ಬಾಕಿ ಇವೆ ಎಂದು ಕೇಳಿರುವುದಕ್ಕಷ್ಟೇ ನಾವು ಉತ್ತರಗಳನ್ನು ಒದಗಿಸಿದ್ದೇವೆ. ದುದ್ದ ಹೋಬಳಿ ಅಂದಾಜು ಪಟ್ಟಿಯನ್ನು ತಯಾರಿಸಿ ವಿದ್ಯುತ್ ಮಂಜೂರಾತಿಯನ್ನು ಹಾಸನ ಜಿಲ್ಲಾ ಪಂಚಾಯತಿ ಇಂಜಿನಿಯರಿಂಗ್ ವಿಭಾಗಕ್ಕೆ ತಿಳಿಸಬೇಕಾಗಿದೆ. ಮಂಚೇನಹಳ್ಳಿ ಕಾವಲ್, ಐತಾಳ್ ಕಾವಲ್, ದೊಡ್ಡ ಹೊನ್ನೇನಹಳ್ಳಿ, ಹೀಗೆ ಎಲ್ಲಾ ವಿವರಗಳನ್ನು ಕೊಟ್ಟಿದ್ದೇನೆ.

ಶ್ರೀ ಬಿ. ಶಿವರಾಮು : ಯಾವ ಕಾರಣಕ್ಕಾಗಿ ಬಾಕಿ ಇದೆ?

ಶ್ರೀ ಜೆ.ಹೆಚ್. ಪಟೇಲ್ : ಕೆಲವು ತಾಂತ್ರಿಕ ಕಾರಣಕ್ಕಾಗಿ, ಒಟ್ಟು 15 ಯೋಜನೆಗಳ

ಮಂಜೂರು ಮಾಡಿದ್ದೇವೆ, ಅದರೊಳಗೆ 7 ಯೋಜನೆಗಳ ಕೆಲಸವಾಗಿವೆ, 4 ರಲ್ಲಿ ಟೆಕ್ನಿಕಲಿ ನಾಟ್ ಫಿಸಿಬಲ್ ಎಂದು ಆಗಿದೆ, 4 ಕ್ಕೆ ಈಗ ಎಸ್ಟಿಮೇಟ್ ಮಾಡುತ್ತಿದ್ದೇವೆ.

ಶ್ರೀ ಬಿ. ಶಿವರಾಮು : ಮಾನ್ಯ ಅಧ್ಯಕ್ಷರೇ, ತಾಂತ್ರಿಕವಾಗಿ ಮತ್ತೊಂದು ಕೊರತೆ ಎಂದು ಹೇಳತಕ್ಕಂಥದ್ದು, ಇರಲಿ, ನಾನು ಏಕೆ ಈ ಪ್ರಶ್ನೆ ಹಾಕಿದೆ ಎಂದು ತಾವು ತಿಳಿದುಕೊಳ್ಳಬಹುದು ಮಳೆ ಇಲ್ಲದಿರುವುದರಿಂದ ಕುಡಿಯುವ ನೀರಿನ ಸಮಸ್ಯೆಯ ತೀವ್ರತೆ ಎಷ್ಟಿದೆ ಎಂದರೆ ಹೋದ ವರ್ಷದಲ್ಲಿ ಅರ್ಧ ಭಾಗ ಮಳೆ ನಮ್ಮಲ್ಲಾಗಿರುವುದು. ಯಾವ ಕಾರಣಕ್ಕಾಗಿ ಮತ್ತು ಎಷ್ಟು ದಿವಸಗಳಿಂದ ಎಂದು ಬಹಳ ಪ್ರಾಮುಖ್ಯವಾಗಿ ನಾನು ಕೇಳಿದ್ದೇನೆ. ನೀವು ಒಂದು ವಿಚಾರ ಹೇಳಿದಿರಿ ತಾಂತ್ರಿಕವಾದ ಕೊರತೆ ಫೀಸಿಬಲ್ ಅಲ್ಲ ಎಂದು ವಾಟರ್ ಸಪ್ಲೈಗೆ ನಾನ್ ಫೀಸಿಬಲ್ ಎಂಬ ಪ್ರಶ್ನೆ ಇಲ್ಲಿಯವರೆಗೆ ಇಲ್ಲವೇ ಇಲ್ಲ. ಆದರೆ ನಿಜವಾದ ಸಮಸ್ಯೆ ಏನು ಎಂದು ಅರ್ಥ ಮಾಡಿಕೊಳ್ಳಬೇಕೆಂಬುದು ಉದ್ದೇಶ. ಒಂದನೆಯದಾಗಿ ನಿಮ್ಮ ಇಲಾಖೆಯವರು ನಿಮ್ಮನ್ನು ಹೇಗೆ ಮಿಸ್ ಲೀಡ್ ಮಾಡುತ್ತಾರೆ ಎನ್ನತಕ್ಕಂಥದ್ದು, ಪ್ರಾಮಾಣಿಕವಾಗಿ ನಾವು ಜಿಲ್ಲಾ ಕೆ.ಡಿ.ಪಿ.ನಲ್ಲಿ ಚರ್ಚೆ ಮಾಡಿದಾಗ ಕೊಟ್ಟಂಥ ಸಂಖ್ಯೆ 29. ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ಇಲ್ಲೇ ಇದ್ದಾರೆ, ನೀವು ಬೇಕಾದರೆ ಪ್ರಾಮಾಣಿಕವಾಗಿ ಪರೀಕ್ಷಿಸಬಹುದು. ನಾನೇ ಆ ಸಂಖ್ಯೆಗಳನ್ನು ಹೇಳುತ್ತೇನೆ. 1993ರಲ್ಲಿ 2,1994ರಲ್ಲಿ 6 ಮತ್ತು 1995ರಲ್ಲಿ 21 ಒಟ್ಟು 29 ಬಾಕಿ ಇವೆ ಎಂದು ಹೇಳಿ ಜಿಲ್ಲಾಪಂಚಾಯತಿಯಲ್ಲಿ ಒಪ್ಪಿಕೊಂಡು ಕೆಲಸವನ್ನು ಮಾಡಿಸುತ್ತೇವೆ ಎಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಎರಡನೆಯದಾಗಿ ಅವರು ಕೊರತೆ ಏನು ಎಂಬ ವಿಚಾರವನ್ನು ಹೇಳಿದರು, ಡಿಸ್ಪೆನ್ಸ್ ಹೆಚ್ಚಿಗೆ ಆಗಿದ್ದರಿಂದ ಎಸ್ಟಿಮೇಟ್ ಮಾಡತಕ್ಕಂಥ ಕಾಲದಲ್ಲಿ ಅವರು ಏನು ಮಾಡುತ್ತಾರೆಂದರೆ ವಾಟರ್ ಸಪ್ಲೈ ಜೊತೆಗೆ ಬೇರೆ ನೀರಾವರಿ ಬಾವಿಯನ್ನು ಅದಕ್ಕೆ ತಗಲಿಸಿಬಿಟ್ಟು ಅದಕ್ಕೆ ಟಿ.ಸಿ. ಎನ್ ಟ್ರಸ್ಪ ಮಾಡಿಬಿಡುತ್ತಾರೆ. ಅಂದಾಜು ಹೆಚ್ಚಿಗೆ ಆಗುತ್ತದೆ, ಸುಮಾರು ಒಂದು, ಒಂದೂವರೆ ಎರಡು ಲಕ್ಷ ಆಗುತ್ತದೆ ಮೈಸೂರಿಗೋ, ಬೆಂಗಳೂರಿಗೋ ಅಥವಾ ಹಾಸನಕ್ಕೋ ಎಸ್ಟಿಮೇಟ್ ಮಂಜೂರಾಗಬೇಕು ಎಂದು ಹೇಳಿ ಬಿಡುತ್ತಾರೆ. ಅಧ್ಯಕ್ಷರೇ, ಆ ಅಂದಾಜುಗಳನ್ನು ಕಳುಹಿಸಿದರೆ ಒಂದು ವರ್ಷವಾದರೂ ಮಂಜೂರಾಗುವುದಿಲ್ಲ. ಮತ್ತೆ ಎಸ್.ಆರ್ ರಿವಿಶನ್ ಗೆ ವಾಪಸ್ಸು ಬರುತ್ತದೆ, ಈ ರೀತಿ ಎಷ್ಟು ಬಾಕಿ ಇದೆ ಎನ್ನುವುದು ತಮ್ಮ ಗಮನಕ್ಕೆ ಬರಲಿ ಎಂದು ಪ್ರಶ್ನೆಯನ್ನು ಕೇಳಿದೆ, ಅದಕ್ಕೆ ಉತ್ತರ ಬರಲಿಲ್ಲ. ಅದಕ್ಕೆ ಎಷ್ಟು ದಿವಸ ಎನ್ನತಕ್ಕಂಥದ್ದನ್ನು ಕೇಳಿದೆ, ಆದರೆ ನೀವು ಹೇಳಲಿಲ್ಲ. ನಿಮ್ಮಲ್ಲಿದೆ, ಆದರೆ ಕೊಟ್ಟಿರುವ ಸಂಖ್ಯೆ ಅಪ್ರಾಮಾಣಿಕವಾದದ್ದು, ನಿಜವಾದ ಕೊರತೆ ಎಷ್ಟು ದಿವಸದಿಂದ ಅಂದಾಜು ಮಂಜೂರಾತಿಗೆ ಆ ಕಛೇರಿಗೆ ಈ ಕಛೇರಿಗೆ ಓಡಾಡುತ್ತಿರುವುದು ಎಷ್ಟು ಎಂದು ತಿಳಿದುಕೊಳ್ಳಬೇಕಾಗಿರುವುದು ಎರಡನೆಯದು. ಮೂರನೆಯದಾಗಿ ನಿಜವಾದ ಕೊರತೆ ಏನೆಂದರೆ ಟಿ.ಸಿ. ಸಾಮಗ್ರಿ ಇಲ್ಲವೆಂದು ಹೇಳಿ ಅವರು ಜಿಲ್ಲಾ ಪಂಚಾಯತಿ ಮೀಟಿಂಗ್ ನಲ್ಲಿ ಪ್ರಾಮಾಣಿಕವಾಗಿ ಒಪ್ಪಿಕೊಂಡಿದ್ದಾರೆ. ಈ ವಿಚಾರಗಳನ್ನು ತಾವು ನಿಜವಾಗಿ ಏಕೆ ಇದರಲ್ಲಿ ತಿಳಿಸಲಿಲ್ಲ ಎನ್ನತಕ್ಕಂಥದ್ದು ನನ್ನ ಪ್ರಾಮುಖ್ಯವಾದಂಥ ಪ್ರಶ್ನೆ.

ಶ್ರೀ ಜೆ.ಹೆಚ್. ಪಟೇಲ್ : ಇಷ್ಟೆಲ್ಲಾ ತಿಳಿದುಕೊಂಡು ಮೇಲೆ ಮತ್ತೆ ನನ್ನನೇಕೆ ಕೇಳಿದಿರಿ, ನನಗೆ

ಕೆ.ಇ.ಬಿ.ನವರು ಮಿಸ್ ಲೀಡ್ ಮಾಡಿದ್ದರ ಬಗ್ಗೆ ಅವರು ಉತ್ತರ ಕೊಡಬೇಕಾಗುತ್ತದೆ. ನೀವು ಕೇಳಿರುವ ಪ್ರಶ್ನೆ 15, ಇಂಥ ಹೋಬಳಿನಲ್ಲಿ ಡ್ರಿಂಕಿಂಗ್ ವಾಟರ್‌ಗೆ ಎಲೆಕ್ಟ್ರಿಸಿಟಿ ಏಕೆ ಕೊಟ್ಟಿಲ್ಲವೆಂದು ಕೇಳಿದ್ದರು, ನಾನು ಹೇಳಿದ್ದೇನೆ ಈಗ 7ಕ್ಕೆ ಕೊಟ್ಟಿದೆ, ಆ ಸಂಖ್ಯೆಯೇ ತಪ್ಪಿದ್ದರೆ ಆ ಮಾತು ಬೇರೆ. 29 ಎಂದು ಮಾನ್ಯ ಸದಸ್ಯರು ಹೇಳುತ್ತಾರೆ, ನಾನು ಅದನ್ನು ಒಪ್ಪುತ್ತೇನೆ. ಅವರಿಗೆ ಸ್ಥಳದಲ್ಲಿಯ ಮಾಹಿತಿ ಚೆನ್ನಾಗಿ ಗೊತ್ತಿರಬಹುದು ಮತ್ತು ಈ ವಿಷಯ ಜಿಲ್ಲಾ ಪಂಚಾಯತಿಯಲ್ಲಿ ಚರ್ಚೆಯಾಗಿರಬಹುದು. ಆದರೆ ಈಗ ತಾಂತ್ರಿಕ ಕಾರಣಗಳಿಗೋಸ್ಕರ ಎಂದರೆ, ಒಂದನೆಯದಾಗಿ ಆ ಗ್ರಾಮಪಂಚಾಯತಿ ಹಣ ಕಟ್ಟಬೇಕಾಗಿರತಕ್ಕಂಥದ್ದನ್ನು ಕಟ್ಟದೇ ಅಥವಾ ಜಮೀನು ಸಿಗದೇ ಅಥವಾ ಇನ್ನೇನಾದರೂ ತಾಂತ್ರಿಕ ಕಾರಣಗಳಿಗೆ ಆ ಕೆಲಸ ಆಗದೇ ಇರಬಹುದು. 4 ಎಸ್ಟಿಮೇಟ್ ಮಾಡುತ್ತಿದ್ದಾರೆ ಮತ್ತು 7 ಮುಗಿದಿವೆ ಎಂದು ಹೇಳುತ್ತಿದ್ದೇನೆ, ಇದರೊಳಗಡೆ ಏನು ಮಿಸ್ ಲೀಡ್. ಎರಡನೆಯದಾಗಿ ತಾವು ಜನರಲ್ ಆಗಿ ಇಡೀ ತಾಲ್ಲೂಕಿನಲ್ಲಿ ಎಲ್ಲೆಲ್ಲಿ ವಿದ್ಯುತ್ ಹರಿಯುತ್ತದೆ ಎಂದು ಕೇಳಿದಿರಿ, ದಯವಿಟ್ಟು ತಾವು ಇಂಥ ಗ್ರಾಮದಲ್ಲಿ ಈ ಕಾರಣದಿಂದ ಇಷ್ಟು ವರ್ಷಗಳಿಂದ ಆಗಿಲ್ಲ, ಏಕೆ? ಈ ರೀತಿಯಲ್ಲಿ ನನಗೆ ಪ್ರಶ್ನೆ ಕೇಳಿದರೆ ನನಗೂ ಯಾರೂ ಮಿಸ್ ಲೀಡ್ ಮಾಡುವುದಕ್ಕಾಗುವುದಿಲ್ಲ, ಮತ್ತು ನಿಮಗೂ ನಾನು ಮಿಸ್ ಲೀಡ್ ಮಾಡುವುದಕ್ಕಾಗುವುದಿಲ್ಲ,

ಶ್ರೀ ಬಿ. ಶಿವರಾಮು : ಮಾನ್ಯ ಅಧ್ಯಕ್ಷರೇ, ಅವರು 7 ಮುಗಿದಿದೆ ಎಂದು ಹೇಳಿಲ್ಲ, ಪ್ರಗತಿಯಲ್ಲಿವೆ ಎಂದು ಅವರು ಹೇಳಿದ್ದಾರೆ. ಇನ್ನು ಬಾಕಿ ಇರುವುದಕ್ಕೆ ಅಂದಾಜನ್ನು ತಯಾರು ಮಾಡಬೇಕು ಎಂದು ಹೇಳಿದ್ದಾರೆ. ಅಂದಾಜುಗಳು ಮಂಜೂರಾತಿಗೆ ಯಾವ ಹಂತದಲ್ಲಿ ಇದೆ ಮತ್ತು ಯಾವ ಕಾರಣಕ್ಕಾಗಿ ಮತ್ತು ಎಷ್ಟು ದಿವಸಗಳಿಂದ ಎಂದು ನಾನು ಸ್ಪಷ್ಟವಾಗಿ ಉತ್ತರಕ್ಕಾಗಿ ಕೇಳಿದ್ದೇನೆ. ನನಗೆ ಗೊತ್ತಿದ್ದು ಏಕೆ ಕೇಳಿಯೆಂದರೆ, ಸಚಿವರು ಇವತ್ತಿನ ತೀವ್ರತೆಯನ್ನು ಅರ್ಥ ಮಾಡಿಕೊಂಡು ಅದಕ್ಕೆ ಏನಾದರೂ ಒಂದು ಸ್ಪಷ್ಟ ಆದೇಶವನ್ನು ಕೊಟ್ಟು ಇಷ್ಟು ದಿವಸದಲ್ಲಿ ಕುಡಿಯುವ ನೀರಿಗೆ ಆದ್ಯತೆಯನ್ನು ಕೊಟ್ಟು ಈ ಕೆಲಸವನ್ನು ಮುಗಿಸುತ್ತೇವೆಂದು ಹೇಳುತ್ತಾರೆ ಎನ್ನತಕ್ಕಂಥದ್ದು ನನ್ನ ಒಂದು ದೃಷ್ಟಿ. ಎರಡನೆಯದಾಗಿ ಸಾಮಗ್ರಿ ಕೊರತೆ ಇದೆಯಲ್ಲಾ, ಇದರ ಬಗ್ಗೆ ಜಿಲ್ಲಾ ಪಂಚಾಯತಿಯವರು ಬೇಕಾದಷ್ಟು ಕೊರತೆ ಇದೆ ಎಂದು ಹೇಳುತ್ತಾರೆ ಆದರೆ ಇಲ್ಲಿ ಮಾತ್ರ ನಮಗೆ ಉತ್ತರ ಒದಗಿಸುವಾಗ ಹೇಳುವುದಿಲ್ಲ, ಏಕೆಂದರೆ ಇದನ್ನು ಮುಚ್ಚತಕ್ಕಂಥ ಕೆಲಸ ಏನಿದೆ ಇದಾಗಬಾರದು. ನಿಮ್ಮ ಗಮನಕ್ಕೆ ಬರುವುದರ ಮೂಲ ಜನತೆಯ ತೀವ್ರತೆಗೆ ಅನುಗುಣವಾಗಿ ನೀರನ್ನು ಒದಗಿಸುವಂಥ ಕೆಲಸ ಪ್ರಾಮಾಣಿಕವಾಗಿ ಬೇಗ ಆಗಲಿ ಎನ್ನತಕ್ಕಂಥ ದೃಷ್ಟಿಯಿಂದ ಕೇಳಿದೆ. ನಾನು ಮಿಸ್ ಲೀಡ್ ಮಾಡುತ್ತಿಲ್ಲ, ಬೇಕಾದರೆ ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ಇಲ್ಲೇ ಇದ್ದಾರೆ.

ಶ್ರೀ ಜೆ.ಹೆಚ್. ಪಟೇಲ್ : ಈಗಲೂ ಕೂಡ ಮಾನ್ಯ ಸದಸ್ಯರಿಗೆ ನನ್ನ ವಿನಂತಿ ಇಷ್ಟೆ. ಇಂಥ ಹಳ್ಳಿಯಲ್ಲಿ, ಏಕೆ, ಕೆಲಸ ನಿಂತಿದೆ, ಎಷ್ಟು ವರ್ಷದಿಂದ ನಿಂತಿದೆ, ಮೆಟೀರಿಯಲ್ ತೊಂದರೆಯಿಂದಲೋ ಅಥವಾ ಕಾನೂನು ಅಡೆತಡೆಯೋ, ತಾಂತ್ರಿಕ ತೊಂದರೆಯೋ ಈ ಬಗ್ಗೆ ತಾವು ದಯವಿಟ್ಟು ನನಗೆ ಪತ್ರ ಬರೆಯಿರಿ, ಕೇವಲ ಪ್ರಶ್ನೆಯಲ್ಲ, ಪತ್ರವನ್ನೇ ಬರೆಯಿರಿ. ಈ ಸರ್ಕಾರ ಕುಡಿಯುವ ನೀರಿನ ಸಮಸ್ಯೆಗೆ ಮೊದಲು ಆದ್ಯತೆಯನ್ನು ಕೊಟ್ಟಿದೆ ಎಂಬುವನ್ನು ಮಾನ್ಯ ಸದಸ್ಯರು ಒಪ್ಪಿಕೊಂಡಿದ್ದಾರೆ,

ತಾವು ಆದೇ ರೀತಿಯಲ್ಲಿ ಪರ್ಟಿಕ್ಯುಲರ್ ವಿಲೇಜ್‌ಗೆ ಸಂಬಂಧಪಟ್ಟಂತೆ ಹೆಸರು ಮಾಹಿತಿ ಕಳುಹಿಸಿದರೆ, ನಾನು ಆ ಕೆಲಸ ಮಾಡಿಸುತ್ತೇನೆ.

ಶ್ರೀ ಬಿ. ಶಿವರಾಮು : ನಾನು ಕೂಡ ಐದಾಳ್ ಕಾವಲ್ ವಿಷಯವಾಗಿ ಎಷ್ಟು ದಿವಸದ ಹಿಂದಯೇ ಮಾಹಿತಿಯನ್ನು ಕಳುಹಿಸಿದ್ದೆ ಎಂಬುದನ್ನು ತಾವು ನೋಡಿಬಿಡಿ, ಬಾಕಿ ವಿಚಾರ ತಮಗೇ ಗೊತ್ತಾಗುತ್ತದೆ.

ಶ್ರೀ. ಎ.ಟಿ. ರಾಮಸ್ವಾಮಿ : ಸನ್ಮಾನ್ಯ ಅಧ್ಯಕ್ಷರೇ, ಕುಡಿಯುವ ನೀರಿನ ಸಮಸ್ಯೆ ಎಲ್ಲಾ ಕಡೆಯಲ್ಲಿಯೂ ಇದೆ. ನಮ್ಮ ತಾಲ್ಲೂಕಿಗೂ ಸಹ 20ಕ್ಕೆ ಸಂಪರ್ಕ ಕೊಡಬೇಕು. ಇವುಗಳಿಗೆ ಹಣದ ಅಭಾವವಿಲ್ಲ. ಇವು ವಿಶೇಷ ಯೋಜನೆಯಡಿಯಲ್ಲಿ ತೆಗೆದುಕೊಂಡಂಥವು, ಸಿವಿಲ್ ವೋರ್ಕನ ಆಫ್ ವರ್ಕ ಸಂಪೂರ್ಣವಾಗಿದೆ, ವಿದ್ಯುತ್ ಸಂಪರ್ಕವಿಲ್ಲದೆಯೇ ಅವುಗಳನ್ನು ಇನ್ನೂ ಕಮಿಶನ್ ಮಾಡಿಲ್ಲ. ಆದಕಾರಣ ಯಾವುವು ಸಿವಿಲ್ ವೋರ್ಕನ್ ಆಫ್ ವರ್ಕ ಕಂಪ್ಲೀಟ್ ಆಗಿ ಕೇವಲ ವಿದ್ಯುತ್ ಸಂಪರ್ಕದಿಂದ ಕಮಿಶನ್ ಮಾದಲಿಕ್ಕೇ ಆಗಿಲ್ಲವೋ ಅಂಥವುಗಳನ್ನು ಕಮಿಶನ್ ಮಾಡಲಿಕ್ಕೆ ಏನಾದರೂ ಒಂದು ಕಾಲಮಿತಿಯನ್ನು ನಿಗಧಿ ಮಾಡಿ ಸೂಕ್ತವಾದ ಆದೇಶವನ್ನು ತಮ್ಮಮಂಡಲಿಗೆ ಕೊಡುತ್ತೀರೋ?

10.00 ಎ.ಎಂ.

ಶ್ರೀ ಜೆ.ಹೆಚ್. ಪಟೇಲ್ : ಇದು ಕೇವಲ ವಿದ್ಯುತ್ ಕೊರತೆಯಿಂದಲೇ ನೀರಿನ ಸರಬರಾಜು ನಿಂತಿದ್ದರೆ, ತತ್‌ಕ್ಷಣ ಕೊಡಿಸುತ್ತೇವೆ.

ಶ್ರೀ ಬಿ. ಶಿವರಾಮು : ಇಲ್ಲಿ ವಿದ್ಯುತ್ ಸಂಪರ್ಕ ಒದಗಿಸಿಲ್ಲ ಎನ್ನುವುದೆ ಮುಖ್ಯವಾದಂತಹ ವಿಚಾರ. ಅದನ್ನೇ ನಿಮಗೆ ಪ್ರಮುಖವಾಗಿ ಕೇಳಿರತಕ್ಕಂಥಾದ್ದು. ತಾವು ನಿರ್ದಿಷ್ಟವಾಗಿ ಇಷ್ಟು ದಿವಸದೊಳಗೆ ಮಾಡಿಸುತ್ತೇವೆ ಎಂದು ಹೇಳುತ್ತೀರಾ? ಬಂಗಾಲದಿಂದ ನೀರಿನ ಸಮಸ್ಯೆ ಸೀರಿಯಾಸ್ಸಾಗಿದೆ. ಆದ್ದರಿಂದ ಕೇಳುತ್ತಿದ್ದೇವೆ.

ಅಧ್ಯಕ್ಷರು : ಮಾನ್ಯ ಶಿವರಾಂರವರೇ, ನೀವು ಹಿರಿಯ ಸದಸ್ಯರು ಮಾನ್ಯ ಮಂತ್ರಿಗಳು ನಿಮಗೆ ಸ್ಪೆಸಿಫಿಕ್ ದಿಟ್ಟೈಲ್ಸ ಕೊಡಿ ತಕ್ಷಣ ಅಟೆಂಡ್ ಮಾಡುತ್ತೇವೆಂದು ಹೇಳಿದರು. ಮಾನ್ಯ ರಾಮಸ್ವಾಮಿಯವರ ಸಬ್ಜಿಮೆಂಟರಿಗೆ ಸಿವಿಲ್ ವೋಷನ್ ಕಂಪ್ಲೀಟ್ ಆಗಿ ಎಲೆಕ್ಟ್ರಿಫಿಕೇಷನ್ ಗೋಸ್ಕರ ದಿಲೇಯಾಗಿದೆ ಎಂದರೆ ಅದನ್ನು ತಕ್ಷಣ ಕಳುಹಿಸಿಕೊಡಿ ಅಂಟೆಂಡ್ ಮಾಡುತ್ತೇನೆ ಎಂದು ಹೇಳಿದ್ದಾರೆ ಅದೇ ರೀತಿ ನೀವೂ ಸಹ ದಿಟ್ಟೈಲ್ಸ ಕಳುಹಿಸಿಕೊಡಿ, ಅವರು ಅಟೆಂಡ್ ಮಾಡುತ್ತಾರೆ.

ಶ್ರೀ ಬಿ. ಶಿವರಾಂ : ಮಾನ್ಯ ಅಧ್ಯಕ್ಷರೇ, ಅವರೇ ಸಂಖ್ಯೆ 15 ಎಂದು ಹೇಳಿದ್ದಾರೆ. ಇಷ್ಟು ದಿವಸದೊಳಗೆ ಮಾಡುತ್ತೇವೆ, ಸಾಮಗ್ರಿ ಕೊಡಿಸುತ್ತೇವೆ ಎಂದು ಹೇಳಿದರೆ ನಮಗೆ ಸಾಕು ಅವರೇ ಹೇಳಿದ್ದಾರೆ ಯೋಜನೆಗಳ ಸಂಖ್ಯೆ: 15 ಎಂದು.

ಅಧ್ಯಕ್ಷರು : ಇದು ಮುಗಿಯದ ಲೆಕ್ಕಾಚಾರ.